# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 81 | Pages. 2 | Date: 26-02-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 81 – ಪುಟಗಳು : 2 26-02-2026 ಗುರುವಾರ | Ph: 8762954248 | ದರ : ₹1


# ಮ್ಯಾಗ್ನೆಟ್ ಶಾಲೆಗಳಿಂದ ಗುಣಮಟ್ಟದ ಶಿಕ್ಷಣ

## ಪಶು ಆಸ್ಪತ್ರೆ ಕಟ್ಟಡ ಕಟ್ಟಿ ಕಾಂಪೌಂಡ್ ನಿರ್ಮಿಸದ್ದಕ್ಕೆ ಅಧಿಕಾರಿಗಳಿಗೆ ಕೃಷ್ಣ ಬೈರೇಗೌಡ ಚಾಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಜಿಲ್ಲೆಯ ಕೆಪಿಎಸ್ ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಗಳಾಗಿ ಪರಿವರ್ತಿಸುವ ಮೂಲಕ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಜಿಪಂ ಸಭಾಂಗಣದಲ್ಲಿಂದು ಕೆಡಿಪಿ ಸಭೆ ನಡೆಸಿ ಮಾತನಾಡಿದ ಅವರು, ಹಳ್ಳಿಗಳಲ್ಲಿ ಕೆಲವೆಡೆ ನಾಲ್ಕೈದು ಮಕ್ಕಳು ಮಾತ್ರ ಶಾಲೆಗೆ ಬರುತ್ತಿದ್ದು, ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ನಾಮ್‌ಕೇವಾಸ್ತೆಗೆ ಶಾಲೆಗಳು ನಡೆಯುತ್ತಿರುವ ಪರಿಸ್ಥಿತಿ ಇದೆ. ಇದರಿಂದ ಮಕ್ಕಳಿಗೆ ಸಮರ್ಪಕ ಶಿಕ್ಷಣ ಸಿಗುತ್ತಿಲ್ಲ. ಈ ಹಿನ್ನೆಲೆ ಕೆಪಿಎಸ್ ಶಾಲೆಗಳನ್ನು ಬಲಪಡಿಸಿ ಮ್ಯಾಗ್ನೆಟ್ ಶಾಲೆಗಳಾಗಿ ರೂಪಾಂತರಿಸುವ ಮೂಲಕ ಉತ್ತಮ ಸೌಕರ್ಯ, ಅರ್ಹ ಶಿಕ್ಷಕರು ಮತ್ತು ಗುಣಮಟ್ಟದ ಬೋಧನೆ ಒದಗಿಸುವ ಉದ್ದೇಶ ಸರ್ಕಾರದ್ದು ಎಂದರು. ಜಿಲ್ಲೆಯಲ್ಲಿ 15 ಕೆಪಿಎಸ್ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಶಾಲೆಗಳಲ್ಲೂ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗಿದೆ ಎಂದು ಡಿಡಿಪಿಐ ರಂಗನಾಥ್ ಸಚಿವರಿಗೆ ಮಾಹಿತಿ ನೀಡಿದರು.

ಇದೇ ವೇಳೆ ಬಿಪಿಎಲ್ ಕಾರ್ಡ್ ಆದಾಯ ಮಿತಿಯನ್ನು ಕೇವಲ 1.20 ಲಕ್ಷ ರೂ.ಗೆ ಸೀಮಿತಗೊಳಿಸಿರುವ ಬಗ್ಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಸಚಿವರ ಗಮನ ಸೆಳೆದರು. ಇದರಿಂದ ಗ್ರಾಮೀಣ ಪ್ರದೇಶದ ಅನೇಕ ಬಡವರ ಬಿಪಿಎಲ್ ಕಾರ್ಡ್‌ಗಳು ರದ್ದಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು. ಇದಕ್ಕೆ ಪರಿಶೀಲಿಸಿ ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಸಚಿವರ ಪ್ರಶ್ನೆ ಅಧಿಕಾರಿ ತಬ್ಬಿಬ್ಬು: ಜಿಲ್ಲೆಯ ಜನಸಂಖ್ಯೆ 17 ಲಕ್ಷ, ಈ ಪೈಕಿ ಶೇ.77 ರಷ್ಟು ಮಂದಿ ಸುಶಿಕ್ಷಿತರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಕಳೆದ 33 ವರ್ಷಗಳಿಂದ ಪ್ರತಿ ವರ್ಷ 92,000 ಜನರಿಗೆ ಶಿಕ್ಷಣ ನೀಡುತ್ತಿರುವುದಾಗಿ ವರದಿ ಸಲ್ಲಿಸಿರುವುದು ಹೇಗೆ ಸಾಧ್ಯ ಎಂಬ ಸಚಿವರ ಪ್ರಶ್ನೆಗೆ ಉತ್ತರಿಸಲಾಗದೆ ಅಧಿಕಾರಿಗಳು ತಬ್ಬಿಬ್ಬಾದ ಪ್ರಸಂಗ ನಡೆಯಿತು.

ಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಆಗುತ್ತಿದ್ದಂತೆ ಸಚಿವರು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಜಿಲ್ಲೆಯಲ್ಲಿ ಪ್ರತಿವರ್ಷ 92 ಸಾವಿರ ಅನಕ್ಷರಸ್ಥರನ್ನು ಎಲ್ಲಿಂದ ಸೃಷ್ಟಿ ಮಾಡ್ತಿದ್ದೀರಾ, ಜನಸಂಖ್ಯೆ, ಸಾಕ್ಷರತಾ ಪ್ರಮಾಣ ಎಲ್ಲವೂ ಲಭ್ಯವಿರುವಾಗ ಇಂತಹ ಅಂಕಿ-ಅಂಶಗಳನ್ನು ಹೇಗೆ ನೀಡುತ್ತೀರಿ ಎಂದು ಪ್ರಶ್ನಿಸಿದರು. ಇದಕ್ಕೂ ಸಮರ್ಪಕ ಉತ್ತರ ಬರಲಿಲ್ಲ. ವಾಸ್ತವಕ್ಕೆ ತಕ್ಕಂತೆ ಮಾಹಿತಿ ನೀಡಬೇಕು. ಮುಂದಿನ ಸಭೆಗೆ ಸಮಗ್ರ ಮತ್ತು ನಿಖರ ಮಾಹಿತಿ ತರುವಂತೆ ಸೂಚಿಸಿದರು.

ಮುಂದುವರಿದು ಪಶು ಸಂಗೋಪನೆ ಇಲಾಖೆ ಕಾರ್ಯವೈಖರಿ ವಿರುದ್ಧ ಕೃಷ್ಣ ಬೈರೇಗೌಡ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಹೊಳೆನರಸೀಪುರ ತಾಲೂಕಿನ ಮೂಡಲಹಿಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಪಶು ಆಸ್ಪತ್ರೆಯ ಹೊಸ ಕಟ್ಟಡದ ಅವ್ಯವಸ್ಥೆ ವಿಚಾರವಾಗಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದರು.

ಹೊಸ ಬಿಲ್ಡಿಂಗ್ ಕಟ್ಟಿದ್ದೀರಿ. ಒಂದು ಗೇಟ್ ನಿರ್ಮಿಸುವ ಯೋಗ್ಯತೆ ಇಲ್ಲವೇ, ದನಗಳ ಆಸ್ಪತ್ರೆ ಎಂದರೆ ದನದ ದೊಡ್ಡಿ ಅಲ್ಲ. ಕೆಲಸ ಮಾಡುವ ಜಾಗ ಸ್ವಚ್ಛ, ಸುರಕ್ಷಿತವಾಗಿರಬೇಕು ಎಂಬ ಸ್ವಾಭಿಮಾನ ಇಲ್ಲವೇ ಎಂದು ಸಚಿವರು ಪ್ರಶ್ನಿಸಿದರು.

ಕಟ್ಟಡ ನಿರ್ಮಾಣಕ್ಕೆ ಆಸಕ್ತಿ ತೋರಿದ ಇಲಾಖೆ, ಕಾಂಪೌಂಡ್ ಗೇಟ್ ನಿರ್ಮಾಣವನ್ನು ಕ್ರಿಯಾ ಯೋಜನೆಯಲ್ಲಿ ನಮೂದಿಸದೇ ಬಿಟ್ಟಿರುವುದೇಕೆ ಎಂದು ಆಕ್ಷೇಪಿಸಿದರು.

ಕ್ಲಿನಿಕ್‌ನಲ್ಲಿ ಸಿಬ್ಬಂದಿ ಗೈರು ಹಾಜರಾತಿಯನ್ನೂ ಸಚಿವರು ಗಂಭೀರವಾಗಿ ಎತ್ತಿ ಹಿಡಿದರು. ನೀವು ಸೂಚಿಸಿದ ಸಮಯಕ್ಕೆ

ನಾನು ಭೇಟಿ ನೀಡಿದಾಗ ಅಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ. ಇದು ಯಾವ ರೀತಿಯ ಆಡಳಿತ ಎಂದು ಕಿಡಿಕಾರಿದರು.

ಕಟ್ಟಡ ಯಾರು ನಿರ್ಮಿಸಿದರು ಎಂಬ ಮಾಹಿತಿ ಸಿಗದೇ ಇದ್ದಾಗ, ಆಡಳಿತ ವ್ಯವಸ್ಥೆ ಜಡತ್ವದಲ್ಲಿದೆಯೇ ಅಥವಾ ಸಕ್ರಿಯವಾಗಿದೆಯೇ ಎಂದು ವ್ಯಂಗ್ಯವಾಡಿದರು.

ಕೆಆರ್‌ಐಡಿಎಲ್ ಸರ್ಕಾರಿ ಸಂಸ್ಥೆ ಅಲ್ಲವೇ, ನೀವು ಸರ್ಕಾರಿ ಅಧಿಕಾರಿಯಾಗಿ ಬಂದಿದ್ದೀರಾ, ಗುತ್ತಿಗೆದಾರರ ಪರವಾಗಿ ಬಂದಿದ್ದೀರಾ ಎಂದು ಸಂಬಂಧಿತ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಮಧ್ಯ ಪ್ರವೇಶಿಸಿದ ಕೆ.ಎಂ. ಶಿವಲಿಂಗೇಗೌಡ, ಸಂಬಂಧಿತ ಅಧಿಕಾರಿಗಳನ್ನು ತಕ್ಷಣ ಅಮಾನತು ಮಾಡುವಂತೆ ಸಚಿವರಿಗೆ ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ನಾವು ಪ್ರಶ್ನೆ ಮಾಡಬಾರದೇ, ನೀವು ಪ್ರಶ್ನಾತೀತರಾ, ಪ್ರಶ್ನೆ ಮಾಡಿದರೆ ನಮ್ಮ ಗೌರವವೇ ಕಡಿಮೆಯಾಗುತ್ತದೆ ಎನ್ನುವ ಸ್ಥಿತಿ ಬಂದಿದೆಯೇ ಎಂದು ಅಸಮಾಧಾನ ಹೊರಹಾಕಿದರು.

ಒಂದು ಕಟ್ಟಡದ ಕಥೆ ಹೀಗಿದ್ದರೆ, ನಿಮ್ಮ ಬಳಿ ಚಿಕಿತ್ಸೆ ಗಾಗಿ ತರಲಾಗುವ ಜಾನುವಾರು ಪರಿಸ್ಥಿತಿ ಏನೆಂದು ಪ್ರಶ್ನಿಸಿ, ಮೂಲ ಸೌಕರ್ಯ ಹಾಗೂ ಸೇವಾ ಗುಣಮಟ್ಟ ಸುಧಾರಣೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಹಿಮ್ಸ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಬಾಣಂತಿ ಸಾವು ಪ್ರಕರಣ ಕೆಡಿಪಿ ಸಭೆಯಲ್ಲಿ ಪ್ರತಿ ಧ್ವನಿಸಿತು.

ಘಟನೆ ಕುರಿತು ಸಚಿವರು ಅಧಿಕಾರಿಗಳಿಂದ ವಿವರ ಮಾಹಿತಿ ಪಡೆದುಕೊಂಡರು.

ಹಿಮ್ಸ್ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ರಾಘವೇಂದ್ರ ಪ್ರಸಾದ್ ವಿವರ ನೀಡಿದರು. ಶನಿವಾರ ಶೃತಿ ಎಂಬ ಮಹಿಳೆ ಆಸ್ಪತ್ರೆಗೆ ದಾಖಲಾಗಿದ್ದು, ಕರ್ತವ್ಯನಿರತ ವೈದ್ಯರು ಚಿಕಿತ್ಸೆ ನೀಡಿದ್ದರು. ಭಾನುವಾರ ಮಧ್ಯಾಹ್ನ ಸಾಮಾನ್ಯ ಹೆರಿಗೆ (ನಾರ್ಮಲ್ ಡೆಲಿವರಿ) ನಡೆದಿತ್ತು ಎಂದು ತಿಳಿಸಿದರು. ಹೆರಿಗೆ ಬಳಿಕ ಮಹಿಳೆ ಆರೋಗ್ಯವಾಗಿಯೇ ಇದ್ದು, 10 ನಿಮಿಷ ಬಳಿಕ ಆಕೆಯ ಆರೋಗ್ಯದಲ್ಲಿ ಅಚಾನಕ್ ಏರುಪೇರಾಗಿರುವುದು ಗಮನಕ್ಕೆ ಬಂದಿದೆ.ತಕ್ಷಣ ವೈದ್ಯರು ತುರ್ತು ಚಿಕಿತ್ಸೆ ನೀಡಲು ಮುಂದಾದರು ಎಂದರು.

ಇದು ಮಹಿಳೆಯ ನಾಲ್ಕನೇ ಗರ್ಭಧಾರಣೆಯಾಗಿದ್ದು, ಈ ಹಿಂದೆ ಹಿಮ್ಸ್ ಗೆ ನಿಯಮಿತ ತಪಾಸಣೆಗೆ ಬಂದಿರಲಿಲ್ಲ ಎಂದರು. ಮಹಿಳೆ ಆರೋಗ್ಯ ಸ್ಥಿತಿ ಹದಗೆಟ್ಟಾಗ ಕುಟುಂಬಸ್ಥರು ಬೇರೆ ಆಸ್ಪತ್ರೆಗೆ ಕರೆದೊಯ್ಯುವುದಾಗಿ ಹೊರಟರು, ಭಾನುವಾರ ಸಂಜೆ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾಳೆ ಎಂಬ ಮಾಹಿತಿ ಲಭ್ಯವಾಗಿದೆ ಎಂದರು.

ಮಹಿಳೆಗೆ ನೀಡಲಾದ ಚಿಕಿತ್ಸೆ ಕುರಿತು ಸಭೆಯಲ್ಲಿ ವಿವರಿಸಿದ ಡಾ.ಗಿರಿಜಾ, ಮಹಿಳೆ ಸ್ಥಿತಿ ಹದಗೆಟ್ಟಾಗ ನಾನು ಕೂಡ ಆಸ್ಪತ್ರೆಗೆ ಬಂದು ಪರಿಶೀಲನೆ ನಡೆಸಿದ್ದೇನೆ. ಇದು ತತ್‌ಕ್ಷಣ ಉಂಟಾಗುವ ಆರೋಗ್ಯದ ಏರುಪೇರು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಹೆಚ್.ಎಂ.ರೇವಣ್ಣ ಇದ್ದರು.

# ಚಂದನ ನೇಣು ಬಿಗಿದುಕೊಂಡು ಆತ್ಮಹತ್ಯೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ನೇಣು ಬಿಗಿದು ಆತ್ಮಹತ್ಯೆ ಪ್ರಯತ್ನಿಸಿದ್ದ ಮಹಿಳೆ ಮಂಗಳವಾರ ಹಾಸನದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಮಹಿಳೆಯ ತವರು ಮನೆಯವರು ಪತಿಯಿಂದ ಕೊಲೆ ಎಂದು ಆರೋಪಿಸಿದ ಘಟನೆ ರಾಜನಶಿರಿಯೂರು ಗ್ರಾಮದಲ್ಲಿ ಬುಧವಾರ ನಡೆದಿದೆ.

ಚಂದನ(ಚೆನ್ನಮ್ಮ) 30 ವರ್ಷ ಆತ್ಮಹತ್ಯೆ ಮಾಡಿಕೊಂಡ ಮಹಿಳೆ.

15 ವರ್ಷದ ಹಿಂದೆ ನನ್ನ ತಂಗಿ ಚಂದನಾಳನ್ನು ದೊಡ್ಡಬ್ಯಾಡಗೆರೆಯಿಂದ ರಾಜನಶಿರಿಯೂರು ಗ್ರಾಮದ ಮಧು ಎಂಬ ವ್ಯಕ್ತಿಗೆ ವಿವಾಹ ಮಾಡಿಕೊಟ್ಟಿದ್ದೇವು. ಆರಂಭದಿಂದಲೂ ಪತಿ ಕಿರುಕುಳ ಕೊಡುತ್ತಿದ್ದನು ಎಂದು ಮೃತ ಮಹಿಳೆಯ ಅಣ್ಣ ರಘು ಹೇಳಿದರು.

ಹಲವಾರು ಬಾರಿ ಗಂಡನ ಹಿಂಸೆ ತಾಳಲಾರದೆ ತಂಗಿ ಮನೆ ಬಂದಿದ್ದಳು. ಹಿಂದೊಮ್ಮೆ ವಿಷ ಸೇವಿಸಿ ಅತ್ಮಹತ್ಯೆ ಪ್ರಯತ್ನ ಮಾಡಿದ್ದಳು. ನಾಲ್ಕೈದು ಬಾರಿ ತಂದೆ, ತಾಯಿ ಕುಟುಂಬದವರೆಲ್ಲರೂ ಸೇರಿ ಹೊಂದಾಣಿಕೆಯಿಂದ ಜೀವನ ನಡೆಸಲು ಹೇಳಿ ಕಳಿಸಿದ್ದೇವು. ಹಲವಾರು ಬಾರಿ ಮಾರಣಾಂತಿಕ ಹಲ್ಲೆ ನಡೆಸಿದ್ದನು. ಚಂದನಾ ತವರು ಮನೆಗೆ ಪೋನ್ ಮಾಡಲು ಅವಕಾಶ ಇಲ್ಲದಂತೆ ಮಾಡಿ, ಈ ಬಾರಿಯೂ ತೀವ್ರ ಪ್ರಮಾಣದ ಹಲ್ಲೆ ನಡೆಸಿದ್ದಾನೆ. ನಂತರ ನೇಣು ಬಿಗದುಕೊಂಡತೆ ಮಾಡಿದ್ದಾನೆ

ಎಂದು ಆರೋಪಿಸಿದ ರಘು ದುಂಡು ವ್ಯಕ್ತಪಡಿಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಪರ್ವತಯ್ಯ ಮಾತನಾಡಿ, ಪತಿ ಮಧು ಕಿರುಕುಳ ಕೊಡುವ ವಿಚಾರವಾಗಿ ಹಲವಾರು ಬಾರಿ ಚಂದನಾ ತವರಿಗೆ ಬಂದಿದ್ದಳು. ನಾವು ಗ್ರಾಮದವರೆಲ್ಲ ಸೇರಿ ಪಂಚಾಯಿತಿ ಮಾಡಿ ಗಂಡನ ಮನೆಗೆ ಕಳಿಸಿದ್ದೆವು. ಈ ಬಾರಿ ಮಾರಣಾಂತಿಕ ಹಲ್ಲೆ ಮಾಡಿದ್ದಾನೆ. ಚಂದನಾ ಸಾಯುತ್ತಾಳೆ ಎಂಬುದು ತಿಳಿದು ನೇಣಿನ ಸ್ಥಿತಿಯಲ್ಲಿಟ್ಟು ಆಸ್ಪತ್ರೆಗೆ ಸೇರಿಸಿದ್ದಾನೆ. ವಿಕೃತವಾಗಿ ಹಲ್ಲೆ ನಡೆಸಿರುವುದಾಗಿ ತಿಳಿದು ಬಂದಿದೆ. ಆರೋಪಿ ಮಧು ಗೆ ಕಠಿಣ ಶಿಕ್ಷೆ ಆಗಬೇಕು ಎಂದರು.

ಚಂದನಾ ತಾಯಿ, ಸಹೋದರಿಯರು ಹಾಗೂ ಸಂಬಂಧಿಕರು ಆಕ್ರಂದನ ಮುಗಿಲು ಮುಟ್ಟುವಂತೆ ಕೇಳುತ್ತಿತ್ತು. ಪೊಲೀಸ್ ಬಂದೋಬಸ್ತ್ ನಲ್ಲಿ ಅಂತ್ಯಕ್ರಿಯೆ ನಡೆಯಿತು.

ಹಳೇಬೀಡು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರೆಸುವುದಾಗಿ ತಿಳಿಸಿದ್ದಾರೆ.

# ಆಸ್ಪತ್ರೆಯವರೇ ಮಗು ಆರೈಕೆ ಮಾಡಲಿ

## ತಪ್ಪು ಮಾಡಿರುವ ವೈದ್ಯರ ಮೇಲೆ ಕ್ರಮ ಆಗಲಿ: ಶ್ರುತಿ ಪತಿ ಕಣ್ಣೀರ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ನಗರದ ಹಿಮ್ಸ್ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯದಿಂದಲೇ ನನ್ನ ಪತ್ನಿ ಶ್ರುತಿ ಸಾವನ್ನಪ್ಪಿದ್ದು, ಹಾಲುಗಲ್ಲದ ನನ್ನ ಮಗುವನ್ನು ನಾನು ಸಲಹೆ ಪೋಷಣೆ

ಮಾಡುವುದು ಕಷ್ಟವಿದೆ. ಹಾಗಾಗಿ ವೈದ್ಯರೇ ಮುಂದಿನ ಆರು ತಿಂಗಳ ಕಾಲ ನನ್ನ ಮಗುವನ್ನು ಸಂತೈಸಿ ನಂತರ ನನಗೆ ಕೊಡಬೇಕು ಎಂದು ಮೃತರ ಪತಿ ಪುನೀತ್

ಕಣ್ಣೀರ ಮನವಿ ಮಾಡಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಪತ್ನಿ ಒಳ ಹೋಗುವಾಗ ಚೆನ್ನಾಗಿಯೇ ಇದ್ದಳು. ಆಕೆಗೆ ಯಾರು ಚಿಕಿತ್ಸೆ ನೀಡಿದರು ಎಂಬುದೂ ಗೊತ್ತಿಲ್ಲ. ಹೊಟ್ಟೆನೋವು ಎಂದು ಅಂಗಲಾಚಿದರೆ, ವೈದ್ಯರು ನಿರ್ಲಕ್ಷ್ಯದಿಂದ ನಡೆದುಕೊಂಡಿದ್ದಾರೆ. ತುಂಬಾ ಲಘುವಾಗಿ ಮಾತನಾಡಿದ್ದಾರೆ ಎಂದು ದೂರಿದರು.

ಆಸ್ಪತ್ರೆಗೆ ದಾಖಲಾದ ನಂತರ ಇಂಥ ದಿನ ಹೆರಿಗೆ ಎಂದು ಹೇಳಲಿಲ್ಲ. ನೋವು ತಡೆದುಕೊ ಎಂದಷ್ಟೇ ಹೇಳಿದ್ದಾರೆ, ಭಾನುವಾರ ರಜಾ ದಿನವಾದ್ದರಿಂದ ವೈದ್ಯರು ಕರ್ತವ್ಯದಲ್ಲಿರದೆ ಬೇರೆಡೆ ಹೋಗಿದ್ದರುಮ ಯುವ ವೈದ್ಯರ ಕಡೆ ಕೆಲಸ ಮಾಡಿಸಿದ್ದಾರೆ ಎಂದು ಆರೋಪಿಸಿದರು.

ಆಸ್ಪತ್ರೆ ಹೊರಗೆ ನೋಡೋಕೆ ಚೆನ್ನಾಗಿದೆ. ಒಳಗೆ ಯಾವುದೇ ಸೌಲಭ್ಯ ಇಲ್ಲ. ಯಾವುದೇ ಹಿರಿಯ ವೈದ್ಯರು ನನ್ನನ್ನು ಸರಿಯಾಗಿ ನೋಡುತ್ತಿಲ್ಲ ಎಂದು ನನ್ನ ಪತ್ನಿ

ಫೋನ್ ಮಾಡಿ ಹೇಳಿದ್ದರು. ಈಗ ಡಿಲೆವರಿ ಆದಮೇಲೂ ಶ್ರುತಿ ಚೆನ್ನಾಗಿದ್ರೂ ಅಂತ ಅಂತಾರೆ, ನಡುವೆ ಏನಾಯ್ತು ಎಂದು ಪ್ರಶ್ನಿಸಿದರು. ನಾವೇ ಒಳ ಹೋಗಲು

ಸೆಕ್ಯುರಿಟಿ ಬಿಡಲಿಲ್ಲ, ನನಗೆ ಯಾವುದೇ ಪರಿಹಾರ ಬೇಡ, ನನಗೆ ನ್ಯಾಯ ಬೇಕು ಎಂದು ಅಳುತ್ತಲೇ ಮನವಿ ಮಾಡಿದರು. ಏಕೆಂದರೆ ಈ ಆಸ್ಪತ್ರೆಗೆ ಹೆಚ್ಚಾಗಿ ಬಡವರೇ ಬರುತ್ತಾರೆ, ಮುಂದೆ ಯಾರಿಗೂ ಹೀಗೆ ಆಗಬಾರದು ಎಂದು ಹೇಳಿದರು.

ಹಿಂದೆ ಸಾವಿರಾರು ಜೀವ ಉಳಿಸಿದ್ದೇವೆ ಅಂತಾರೆ, ಆದರೆ ನನ್ನ ಪತ್ನಿ ಏಕೆ ಸಾಯಿಸಿದ್ರು ಎಂದು ಕೇಳಿದ ಅವರು, ಈಗ ನನ್ನ ಮಗುವನ್ನು ನೋಡಲು ಐಸಿಯುಗೆ ಬಿಡಲಿಲ್ಲ. ನನಗೆ ಮಗು ಬೇಕು. ಮುಂದಿನ ಆರು ತಿಂಗಳ ಕಾಲ ಅವರೇ ಸಂತೈಸಲಿ, ವೈದ್ಯರು ಮಾಡಿರುವ ತಪ್ಪಿಗೆ ಮಗುವನ್ನು ಆರೈಕೆ ಮಾಡಿ ಉಳಿಸಿಕೊಡಲಿ ಎಂದು ಮನವಿ ಮಾಡಿದರು.

ಗರ್ಭಿಣಿಯಾಗಿದ್ದರೂ, ಶ್ರುತಿ ಸಂಪೂರ್ಣ ಆಕ್ಟೀವ್ ಆಗಿದ್ದರು. ರಕ್ತ ಹಾಕಿದ ಮೇಲೆ ಹೀಗಾಗಿದೆ. ಸರ್ಕಾರಿ ವೈದ್ಯರು ಖಾಸಗಿಯಾಗಿ ಉತ್ತಮ ಕೆಲಸ ಮಾಡುತ್ತಾರೆ,

ಇಲ್ಲಿ ಏಕೆ ಮಾಡಲ್ಲ ಎಂದು ಪ್ರಶ್ನಿಸಿದರು. ನನಗೆ ಆಗಿರುವುದು ಬೇರೆ ಯಾರಿಗೂ ಆಗೋದು ಬೇಡ, ಸಂಬಂಧಪಟ್ಟವರು ಪರಿಶೀಲಿಸಿ ತಪ್ಪು ಮಾಡಿರುವವರ ಮೇಲೆ ಕ್ರಮ ಆಗಬೇಕೆಂದು ವಿನಂತಿಸಿದರು. ಸುದ್ದಿಗೋಷ್ಠಿಯಲ್ಲಿ ಮೃತರ ಸಂಬಂಧಿಕರಾದ ಯತೀಶ್, ಲಾವಣ್ಯ, ಶಿವಣ್ಣ, ತೀರ್ಥ ಪ್ರಸಾದ್, ಜ್ಯೋತಿ, ಯಶು ದೊಡ್ಡಪುರ ಇದ್ದರು.

# ನೂತನ ಶಿಲಾ ವಿಗ್ರಹದ ಪ್ರತಿಷ್ಠಾಪನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**





ನುಗ್ಗೇಹಳ್ಳಿ: ಈಶ್ವರನ ಪೂಜೆ ಧ್ಯಾನ ಅಭಿಷೇಕ, ರುದ್ರ ಹೋಮಗಳು ಎಲ್ಲಾ ಕಡೆ ಹೆಚ್ಚಾಗಿ ನಡೆಯುವುದರಿಂದ ದೇಶದ ಜನತೆಯ ಕಷ್ಟದ ಸಮಸ್ಯೆಗಳು ದೂರವಾಗಿ ಸುಜ್ಞಾನದಿಂದ ದೇಶ ಮಂಗಳಮಯವಾಗಿ ಅಭಿವೃದ್ಧಿಯತ್ತ ಸಾಗುತ್ತದೆ ಎಂದು ಶೃಂಗೇರಿ ಮಠದ ವೇದಮೂರ್ತಿಗಳಾದ ರಾಮನಂದ್ ಭಟ್ ಬುಧವಾರ ತಿಳಿಸಿದರು.

ಹೋಬಳಿಯ ಹೆಸರಾಂತ ಸಾಹಿತಿ ಎಸ್‌ಎಲ್ ಭೈರಪ್ಪನವರ ಹುಟ್ಟೂರು ಸಂತೆ ಶಿವರ ಗ್ರಾಮದ ಗ್ರಾಮದೇವತೆ ಕೆಂಪಮ್ಮ ದೇವಿಯ ನೂತನ ಶಿಲಾ ವಿಗ್ರಹದ ಪ್ರತಿಷ್ಠಾಪನೆ ಚಂಡಿಕಾ ಹೋಮ ಹಾಗೂ ಕುಂಭಾಭಿಷೇಕ ಮಹೋತ್ಸವದ ಧಾರ್ಮಿಕ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ರುದ್ರ ಮಂತ್ರಗಳಲ್ಲಿ ಶಕ್ತಿ ಇದೆ ಮನಸ್ಸಿನಲ್ಲಿ ಶಿವನನ್ನು ನೆನೆದರೆ ದುಃಖದ ಕಷ್ಟಗಳು ದೂರವಾಗುತ್ತವೆ ಕುಲದೇವತಾ ಆರಾಧನೆ ಗಣಪತಿ ಹೋಮ ಚಂಡಿಕಾ ಹೋಮಗಳಿಂದ ಹಳ್ಳಿಗಳ ಅಭಿವೃದ್ಧಿಯಾಗುತ್ತದೆ ಇದರಿಂದ ಮಕ್ಕಳ ವಿದ್ಯಾಭ್ಯಾಸ, ರೈತರಿಗೆ ಸಕಾಲದಲ್ಲಿ ಮಳೆ ಬೆಳೆ, ಮಕ್ಕಳ ಮದುವೆ ಶುಭಕಾರ್ಯಗಳು ನಿಲ್ಲದೆ ಸಕಾಲದಲ್ಲಿ ನಡೆಯುತ್ತವೆ, ಮಾತೇರಿಗೆ ಒಳಿತಾಗುತ್ತದೆ, ಗ್ರಾಮಸ್ಥರು ಒಗ್ಗಟ್ಟಾಗಿ ಮಾಡುವ ಧಾರ್ಮಿಕ ಪೂಜಾ ಕಾರ್ಯಗಳ ಅನ್ನದಾನದಿಂದ ಅನ್ನಶಾಂತಿಯಾಗುತ್ತದೆ ಇದು ಒಂದು ಪುಣ್ಯದ ಕೆಲಸ, ಗ್ರಾಮದೇವತೆ ಕೆಂಪಮ್ಮ ದೇವಿಗೆ 48 ದಿನಗಳ ಕಾಲ ಮಂಡಲ ಪೂಜಾ ಕಾರ್ಯವನ್ನು ಶ್ರದ್ಧಾ ಭಕ್ತಿಯಿಂದ ಪೂಜೆ ನೆರವೇರಿಸಿ ಕೆಂಪಮ್ಮ ಶಕ್ತಿ ದೇವತೆಯಾಗುತ್ತದೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಪಟೇಲ್ ಗಂಗೆಗೌಡ (ರಾಜಣ್ಣ) ಮಾತನಾಡಿ ಧರ್ಮ ಆಚರಣೆ ಇಲ್ಲದ ಮನುಷ್ಯನ ವ್ಯಕ್ತಿತ್ವಕ್ಕೆ ಬೆಲೆ ಸಿಗಲಾರದು ಬೆಲೆಯುಳ್ಳ ಅಮೂಲ್ಯ ಬದುಕಿಗೆ ಸಂಸ್ಕಾರ ಮುಖ್ಯವಾದದ್ದು ಸತ್ಯ ಶುದ್ಧ ಮಾರ್ಗದಲ್ಲಿ ನಡೆದರೆ ಸುಖ ಶಾಂತಿ ನೆಮ್ಮದಿ ದೊರೆಯುತ್ತದೆ ದೇವರ ಅನುಗ್ರಹವಿಲ್ಲದೆ ಏನು ನಡೆಯಲು ಸಾಧ್ಯವಿಲ್ಲ ಭಕ್ತಿಯಿಂದ ಪೂಜಿಸಿದರೆ ಎಲ್ಲಾ ಕೆಲಸಗಳು ಸುಗಮವಾಗಿ ನಡೆಯುತ್ತವೆ ಎಂದರು.

ಪುರಾಣ ಪ್ರಸಿದ್ಧ ಶ್ರೀ ಗಂಗಾಧರೇಶ್ವರ ಸ್ವಾಮಿ ದೇಗುಲ ಜೀರ್ಣೋದ್ಧಾರ ಮಾಡಲು ಭಕ್ತರಿಗೆ ಹೆಚ್ಚಿನ ಶಕ್ತಿ ಕೊಡಲಿ ಎಂದು ಕೆಂಪಮ್ಮದೇವಿಯಲ್ಲಿ ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಬ್ಯಾಂಕ್ ಮ್ಯಾನೇಜರ್ ನಾಗರಾಜ್ ರಾವ್, ನಿವೃತ್ತ ರೇಷ್ಮೆ ಅಧಿಕಾರಿ ಕೃಷ್ಣ ಪ್ರಸಾದ್, ಬೆಂಗಳೂರು ಅನಂತರಾವ್ ಜೋಯಿಸ್, ಉಪನ್ಯಾಸಕ ವೇಣುಗೋಪಾಲ್, ಗ್ರಾಮ ಪಂಚಾಯತಿ ಸದಸ್ಯ ಮಧು ಪಟೇಲ್, ಗುಡಿ ಗೌಡ ಎಸ್. ರವೀಶ್, ಕುಳ್ಳೇಗೌಡ, ಪ್ರಭಾಕರ್ ಜೋಯಿಸ್, ಬೆಂಗಳೂರು ರುದ್ರ ಪ್ರಸಾದ್, ದೀಪು, ರಮೇಶ್, ರಂಗಶೆಟ್ಟಿ, ಧನಂಜಯ, ಬೀರೇಗೌಡ, ರಾಜು, ಶಿವಕುಮಾರ್, ಪ್ರಜ್ವಲ್, ಅರ್ಜುನ, ಇತರರು ಹಾಜರಿದ್ದರು.

# ದೀನಹಳ್ಳಿಗೆ ಕಾಂಕ್ರಿಟ್ ರಸ್ತೆ ಭಾಗ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಹಲವು ವರ್ಷಗಳಿಂದ ಸಂಚರಿಸಲು ಕಷ್ಟವಾಗಿದ್ದ ತಾಲೂಕಿನ ಹರಗರಹಳ್ಳಿಯಿಂದ ದೀನಹಳ್ಳಿ ಗ್ರಾಮಕ್ಕೆ 890 ಮೀಟರ್ ಉದ್ದದ ಕಾಂಕ್ರಿಟ್ ರಸ್ತೆ ಭಾಗ್ಯ ಹಲವು ದಶಕಗಳ ನಂತರ ಸಿಕ್ಕಿದೆ. ಬೊಮ್ಮನಕೆರೆಯಿಂದ ಮಲ್ಲಿಕಾರ್ಜುನ ದೇವಾಲಯದ ವರೆಗೆ 1 ಕಿಮೀ ಕಾಂಕ್ರಿಟ್ ರಸ್ತೆ ನಿರ್ಮಾಣಕ್ಕೆ ಎತ್ತಿನಹೊಳೆ ಯೋಜನೆಯಡಿ ಆರ್ ಸಿಸಿ ರಸ್ತೆ ನಿರ್ಮಾಣಕ್ಕೆ ಸ್ಥಳೀಯ ಶಾಸಕ ಸಿಮೆಂಟ್ ಮಂಜು ಗುದ್ದಲಿಪೂಜೆ ನೆರವೇರಿಸಿದರು. ದೀನಹಳ್ಳಿ, ಬೊಮ್ಮನಕೆರೆ, ಹರಗರಹಳ್ಳಿ ಗ್ರಾಮಸ್ಥರು ಪೂಜೆ ಕಾರ್ಯದಲ್ಲಿ ಖುಷಿಯಿಂದ ಭಾಗಿಯಾದರು. ಮುಂದೆಯಾದರೂ ಹೆಣಗಾಡುವ ಪರಿಸ್ಥಿತಿ ಇಲ್ಲವಾಗಲಿದೆ ಎಂದು ನಿಟ್ಟುಸಿರುವ ಬಿಟ್ಟರು. ದಶಕಗಳಿಂದಲೂ ಈ ಗ್ರಾಮಕ್ಕೆ ರಸ್ತೆ ಬೇಡಿಕೆ ಇತ್ತು. ಓಡಾಡಲು ಕಷ್ಟವಿತ್ತು. ಅದೀಗ ಈಡೇರುವ ಹಂತಕ್ಕೆ ಬಂದಿರೋದು ಸಂತಸದ ವಿಚಾರ ಎಂದು ಶಾಸಕರು ಅಭಿಪ್ರಾಯ ಹಂಚಿಕೊಂಡರು.

ನಂತರ ಮಂಜು ಅವರು ಬೊಮ್ಮನ ಕೆರೆ ಗ್ರಾಮದ ಬಸ್ ನಿಲ್ದಾಣ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ರೋಷನ್, ರೇಣುಕಾ, ಪ್ರಮುಖರಾದ ಪುಟ್ಟಣ್ಣ ಇಂದ್ರಶೇಖರ್, ಸೋಮಯ್ಯ, ಪಾಲಾಕ್ಷ ಸೇರಿದಂತೆ ಬಿ.ಜೆ.ಪಿ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.

# ಪ್ರತಿಮೆ: ತರಾತುರಿ ನಡೆಗೆ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ : ಮಹಾನ್ ಮಾನವತಾವಾದಿ ಜಗಜ್ಯೋತಿ ಬಸವೇಶ್ವರರ ಪುತ್ತಳಿಯನ್ನು ನಗರದಲ್ಲಿ ಸ್ಥಾಪಿಸುವುದು ಸ್ವಾಗತಾರ್ಹ. ಆದರೆ ಬಸವಣ್ಣನವರ ಪುತ್ಥಳಿ ಸ್ಥಾಪಿಸಲು ಹೊರಟಿರುವವರು ಬಸವಣ್ಣನ ವಚನಗಳನ್ನ ಪಾಲಿಸುವ ಮನಸ್ಥಿತಿ ಹೊಂದಿರುವವರೇ ಎಂಬುದು ಸದ್ಯದ ಪ್ರಶ್ನೆ ಯಾಗಿದೆ ಎಂದು ಕಳೆದ ವಿಧಾನಸಭಾ ಚುನಾವಣೆ ಪರಾಜಿತ ಅಭ್ಯರ್ಥಿ ಹಾಗೂ ಜೆಡಿಎಸ್ ಮುಖಂಡ ಎನ್. ಆರ್ ಸಂತೋಷ್ ವ್ಯಂಗ್ಯವಾಗಿ ಹೇಳಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು ಬಸವೇಶ್ವರರು ಒಂದು ಜಾತಿ, ಧರ್ಮಕ್ಕೆ ಸೀಮಿತವಾದವರಲ್ಲ. ಅಂತಹ ಮಹಾನ್ ದಾರ್ಶನಿಕರ ಪ್ರತಿಮೆಯನ್ನು ನಗರದಲ್ಲಿ ಪ್ರತಿಷ್ಠಾಪಿಸುವ ಮೊದಲು ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಒಂದು ಸಭೆ ನಡೆಸಿ ಸಭೆಯಲ್ಲಿ ಸೂಕ್ತ ಸ್ಥಳ ಆಯ್ಕೆ ಮಾಡಿಕೊಂಡು ಬಳಿಕ ಮುಂದಾದರೆ ಅದು ಅರ್ಥಪೂರ್ಣ ಎನಿಸುತ್ತದೆ. ಆದರೆ ಶಿವಲಿಂಗೇಗೌಡರು ತಾರಾತುರಿಯಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪನೆಗೆ ಹೊರಟಿರುವುದು ಸರಿಯಲ್ಲ ಎಂದರು.

ನಗರ ಸೇರಿದಂತೆ ತಾಲೂಕಿನಲ್ಲಿ ಬಸವ ತತ್ವ ಅನುಯಾಯಿಗಳು ದೊಡ್ಡ ಪ್ರಮಾಣದಲ್ಲಿದ್ದಾರೆ. ಅಲ್ಲದೆ ಬಸವೇಶ್ವರ ಪುತ್ಥಳಿ ತಾಲೂಕಿನಲ್ಲಿ ಎಲ್ಲೂ ಇಲ್ಲದೇ ಇರುವುದು ಅವರೆಲ್ಲರ ಅಸಮಾಧಾನಕ್ಕೂ ಕಾರಣವಾಗಿದೆ. ಹಾಗಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸೂಕ್ತ ಸ್ಥಳದಲ್ಲಿ ಬಸವೇಶ್ವರ ಪ್ರತಿಮೆ ಸ್ಥಾಪಿಸಿದರೆ ಶಾಶ್ವತವಾಗಿರುತ್ತದೆ. ಈ ನಿಟ್ಟಿನಲ್ಲಿ ಇನ್ನೂ ಕಾಲ ಮಿಂಚಿಲ್ಲ, ಶಾಸಕ ಶಿವಲಿಂಗೇಗೌಡರು ಗಮನ ಹರಸಲಿ ಎಂದು ಸಲಹೆ ನೀಡಿದರು.

ಬಸವೇಶ್ವರ ಪುತ್ಥಳಿ ಪ್ರತಿಷ್ಠಾಪನೆಗೆ ನಾನೂ ಸಹ ವೈಯಕ್ತಿಕವಾಗಿ ತನು ಮನ ಧನ ಸಮರ್ಪಣೆ ಮಾಡಲು ಸಿದ್ದನಿದ್ದೇನೆ. ಅಷ್ಟೇ ಅಲ್ಲದೆ ತಾಲೂಕಿನ ಜನತೆಯ ಹಿತದೃಷ್ಟಿ, ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮ್ಮ ಸಹಕಾರ ಇರುತ್ತದೆ ಎಂದು ಪ್ರತಿಕ್ರಿಸಿದರು.

# ಈ ಮನುಷ್ಯನಿಗೆ ನೈತಿಕತೆ ಇಲ್ಲ

## ಕೆಎಂಶಿ ವಿರುದ್ಧ ರೇವಣ್ಣ ಕಿಡಿ: ತರಕಾರಿ ಮಾರುಕಟ್ಟೆ ಸ್ಥಳಾಂತರಕ್ಕೆ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಯಾರಿಗೂ ಅಧಿಕಾರ ಶಾಶ್ವತವಲ್ಲ, ಅದು ಸಿಕ್ಕ ಅವಧಿಯಲ್ಲಿ ನಾವು ಮಾಡುವ ಜನಪರ ಕೆಲಸ ಕಾರ್ಯಗಳೇ ಶಾಶ್ವತ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹೇಳಿದರು. ನಗರದ ತರಕಾರಿ ಮಾರುಕಟ್ಟೆಗೆ ಬುಧವಾರ ಭೇಟಿ ನೀಡಿ, ತರಕಾರಿ ವ್ಯಾಪಾರಸ್ಥರು, ಫುಟ್‌ಪಾತ್ ವ್ಯಾಪಾರಿಗಳ ಸಮಸ್ಯೆ ಮತ್ತು ದೂರು ಆಲಿಸಿ ಅವರು ಮಾತನಾಡಿದರು.

ಹಲವು ದಶಕಗಳಿಂದ ನಗರದ ಹೃದಯಭಾಗದಲ್ಲಿರುವ ತರಕಾರಿ ಮಾರುಕಟ್ಟೆಯನ್ನು ನಂಬಿ ನೂರಾರು ಕುಟುಂಬಗಳು ಜೀವನ ನಿರ್ವಹಣೆ ಮಾಡುತ್ತಿವೆ. ಆದರೆ ಸ್ಥಳೀಯ ಶಾಸಕರು ಇವರನ್ನು ಒಕ್ಕಲೆಬ್ಬಿಸಲು ಮುಂದಾಗಿರುವುದು ಖಂಡನೀಯ. ಬಡಪಾಯಿಗಳ ಹೊಟ್ಟೆ ಮೇಲೆ ಹೊಡೆದಂತೆ ಆಗುತ್ತದೆ ಅಲ್ಲವೇ ಎಂದು ಬೇಸರ ಹೊರ ಹಾಕಿದರು.

ತರಕಾರಿ ಮಾರುಕಟ್ಟೆ ನಡೆಯುವ ಜಾಗದಲ್ಲಿ ಫುಡ್‌ಕೋರ್ಟ್ ಮಾಡಲು ಹೊರಟಿರುವ ಶಾಸಕರ ನಡೆಯನ್ನು ತೀವ್ರವಾಗಿ ವಿರೋಧಿಸಿದ ಅವರು, ಫುಡ್‌ಕೋರ್ಟ್‌ನ್ನು ಬೇರೆ ಎಲ್ಲಾದರೂ ಮಾಡಲಿ, ಇದನ್ನು ಬಿಟ್ಟು ಹತ್ತಾರು ವರ್ಷದಿಂದ ತರಕಾಗಿ ವ್ಯಾಪಾರ ಮಾಡಿಕೊಂಡು ಬರುತ್ತಿರುವವರನ್ನು ಬೀದಿಪಾಲು ಸರಿಯಲ್ಲ ಎಂದು ಹೆಸರು ಹೇಳದೆಯೇ ಶಿವಲಿಂಗೇಗೌಡರ ನಡೆಯನ್ನು ಬಲವಾಗಿ ಖಂಡಿಸಿದರು.

ಅಗತ್ಯ ಬಿದ್ದರೆ ವರ್ತಕರ ಜೊತೆಗೂಡಿ ನಾನು ಹಾಗೂ ನಮ್ಮ ಪಕ್ಷದ ಮುಖಂಡರು ಹೋರಾಟ ಮಾಡಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಸಿದರು.

ನಂತರ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೇವಣ್ಣ, ದೇವೇಗೌಡರ ಮಾತು ಮೀರಿ, ಈ ವ್ಯಕ್ತಿಯನ್ನು ಗೆಲ್ಲಿಸಿದ ತಪ್ಪಿಗೆ ಈಗ ಪಶ್ಚತ್ತಾಪ ಪಡುವಂತಾಗಿದೆ ಎಂದು ಪುನರುಚ್ಚರಿಸಿದರು.

ಜೆಡಿಎಸ್‌ನಲ್ಲಿದ್ದಾಗ ಮೂರು ಬಾರಿ ಶಾಸಕರಾಗಿದ್ದು ಗೌಡರ ಆಶೀರ್ವಾದದಿಂದ, ಚುನಾವಣಾ ಖರ್ಚನ್ನು ನಾನು ಭರಿಸಿದ್ದನ್ನು ಮರೆತು, ಮಾತನಾಡುತ್ತಿರುವ ಈ ಮನುಷ್ಯನಿಗೆ ನೈತಿಕತೆ ಎಂಬುದೇ ಇಲ್ಲ ಎಂದು ಟೀಕಿಸಿದರು. ಪ್ರಸ್ತುತ ರಾಗಿ ಖರೀದಿ ಕೇಂದ್ರದಲ್ಲಿ ತೂಕದಲ್ಲಿ ವ್ಯತ್ಯಾಸ ಮಾಡಲಾಗುತ್ತಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ. ಹೀಗೆ ರೈತರು, ವ್ಯಾಪಾರಸ್ಥರ ವಿರೋಧಿಯಾಗಿ ನಡೆದುಕೊಳ್ಳುತ್ತಿರುವ ಈ ಮನುಷ್ಯನಿಗೆ ಅರಸೀಕೆರೆ ಜನತೆ ಪಾಠ ಕಲಿಸಲಿದ್ದಾರೆ ಎಂದು ಭವಿಷ್ಯ ನುಡಿದರು.

ಅರಸೀಕೆರೆ ಅಭಿವೃದ್ಧಿಗೆ ದೇವೇಗೌಡರು, ಕುಮಾರಸ್ವಾಮಿ, ನಾನು ಏನು ಮಾಡಿದ್ದೇವೆ ಎಂದು ಮುಂದಿನ ದಿನಗಳಲ್ಲಿ ದಾಖಲೆ ಸಮೇತ ತಾಲೂಕಿನ ಜನತೆಗೆ ತಿಳಿಸುತ್ತೇನೆ. ನಮಗೆ ಮೋಸ ಮಾಡಿ, ಮಂತ್ರಿಗಿರಿ ಆಸೆಗಾಗಿ ಕಾಂಗ್ರೆಸ್ ಸೇರಿರುವ ಈ ಮನುಷ್ಯ ಕಾಂಗ್ರೆಸ್‌ಗೆ ಟೋಪಿ ಹಾಕುತ್ತಾನೋ ಕಾದು ನೋಡಿ ಎಂದರು.

ರಾಜ್ಯ ಬಜೆಟ್‌ನಲ್ಲಿ ನಿಮ್ಮ ನಿರೀಕ್ಷೆ ಏನು ಎಂಬ ಪ್ರಶ್ನೆಗೆ ಕುಮಾರಸ್ವಾಮಿ ಆಡಳಿತ ನಂತರ ಹಾಸನ ಅಭಿವೃದ್ಧಿಗೆ ಬ್ರೇಕ್ ಬಿದ್ದಿದೆ. ಈಗ ಏನು ಮಾಡುತ್ತಾರೋ ಕಾದು ನೋಡೋಣ ಎಂದ ಅವರು, ಮುಂದಿನ ಚುನಾವಣೆಯಲ್ಲಿ ಜನರೇ ಉತ್ತರ ಕೊಡಲಿದ್ದಾರೆ. ಜಿಪಂ,ತಾಪಂ ಸೇರಿದಂತೆ ಸ್ಥಳೀಯ ಸಂಸ್ಥೆ ಚುಣಾವನೆಗೆ ನಮ್ಮ ಮುಖಂಡರು, ಪಕ್ಷ ಸಿದ್ಧತೆ ಮಾಡಿಕೊಂಡಿದೆ. ಬಿಜೆಪಿ ಜೊತೆ ಮೈತ್ರಿ ಬಗ್ಗೆ ದೇವೇಗೌಡರು, ಕುಮಾರಣ್ಣ ಸೇರಿ ರಾಜ್ಯ ನಾಯಕರು ತೀರ್ಮಾನಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಜಿ.ಎಸ್.ಪರಮೇಶ್ವರಪ್ಪ, ಜಿಪಂ ಮಾಜಿ ಸದಸ್ಯ ಬಾಣಾವರ ಅಶೋಕ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರಪ್ಪ, ಹಿರಿಯ ಮುಖಂಡರಾದ ವಿವೇಕ್ ಲಾಯರ್, ಕೆಂಕೆರೆ ಕೇಶವಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್, ಸದಸ್ಯ ಹರ್ಷವರ್ಧನ್, ಮುಖಂಡರಾದ ಲಾಳನಕೆರೆ ಯೋಗೇಶ್ ಬಂಡಿಗೌಡ್ರ, ರಾಜಣ್ಣ ಇದ್ದರು.

# ಓಪನ್ ಚಾಂಪಿಯನ್ಶಿಪ್‌ನಲ್ಲಿ ಹಾಸನದ 30 ಕರಾಟೆ ವಿದ್ಯಾರ್ಥಿಗಳಿಗೆ ಪ್ರಶಸ್ತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಮೈಸೂರು ಜಿಲ್ಲೆ ವಿಜಯನಗರದ ಬಸವ ಭವನದಲ್ಲಿ ಇತ್ತೀಚೆಗೆ ನಡೆದ 20ನೇ ಓಪನ್ ಕರಾಟೆ ಚಾಂಪಿಯನ್ಶಿಪ್ ನಲ್ಲಿ ಹಾಸನ ಜಿಲ್ಲೆಯ ನ್ಯಾಷನಲ್ ಶೋಟೋಕನ್ ಕರಾಟೆ ಮಲ್ಟಿಪರ್ಪಸ್ ಫೆಡರೇಶನ್ ಶಾಲೆಯ 30 ಜನ ವಿದ್ಯಾರ್ಥಿಗಳು ಭಾಗವಹಿಸಿ ಕಥಾ ಮತ್ತು ಕುಮಿತೆ ವಿಭಾಗದಲ್ಲಿ ಸ್ಪರ್ಧಿಸಿ ಪ್ರಥಮ ದ್ವಿತೀಯ ಹಾಗೂ ತೃತಿಯ ಬಹುಮಾನಗಳ ವಿಜೇತರಾಗಿದ್ದು ಹಾಸನ ತಂಡವು ಉತ್ತಮ ಪ್ರದರ್ಶನವನ್ನು ನೀಡುವುದರ ಮೂಲಕ ರನ್ನರ್ ಅಪ್ ಪಟ್ಟವನ್ನು ಮುಡಿಗೇರಿಸಿಕೊಂಡಿದೆ.

ಕಥಾ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಸಾನ್ವಿ ಎಸ್ ಹೇಮಶ್ರೀ ಸಿ.ಡಿ , ಧ್ರುವ , ಶ್ರೇಯಸ್ ವಿ , ಸಿಂಚನ ಜೆ.ಎಸ್ ,ಸಮೃದ್ಧ ಟಿ.ಎಂ , ಯುಕ್ತಿ ಎಚ್.ಎನ್, ಮದನ್ ಗೌಡ ಡಿ.ಆರ್, ಪುನೀತ್ ಗೌಡ ಪ್ರಥಮ ಸ್ಥಾನವನ್ನು ಪಡೆದರೆ,

ದ್ವಿತೀಯ ಸ್ಥಾನವನ್ನು ಷಷ್ಠಿ ಟಿ.ಎಂ ,ಜಯಂತ್ ಗೌಡ, ಮುರಳಿ ಎಚ್.ಎಸ್, ಮಿಥುನ್ ಗೌಡ ಬಿ.ಎಂ ,ಕಿರಣ್ ಎಚ್.ಎನ್ ,ದೀಕ್ಷಿತ್ ಎಚ್.ಎಸ್, ಹರ್ಷ ಗೌಡ ಎಂ, ಲಕ್ಷಿತ್ ಜೆ ಶೆಟ್ಟಿ ,ಮೋಕ್ಷಿತ ಎಚ್. ಎಸ್, ಜೀವನ್ ಸಿ.ಕೆ,ರೋನಕ್, ದ್ವಿತೀಯ ಸ್ಥಾನವನ್ನು ಪಡೆದರೆ ತೃತೀಯ ಸ್ಥಾನವನ್ನು ಮಾಯಾಂಕ್ ಟಿ, ನಕುಲ್ ಗೌಡ, ನೂತನ್ ಗೌಡ ಎ.ಆರ್, ಜೀವನ್ ಎಚ್.ಸಿ ಗೌತಮ್ ಗೌಡ ಜಿ.ವಿ ,ಚೇತನ್ ಹೆಚ್.ಬಿ, ತನ್ವಿ ಎಂ ಗೌಡ, ಪ್ರೀತಮ್ ಗೌಡ ಇವರುಗಳು ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ಕುಮಿತೆ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಸಿಂಚನ ಜೆ ಎಸ್, ಜೀವನ್ ಸಿ.ಕೆ, ಮತ್ತು ದ್ವಿತೀಯ ಸ್ಥಾನದಲ್ಲಿ ಮಿಥುನ್ ಗೌಡ, ದೀಕ್ಷಿತ್ ಎಚ್.ಎಸ್ ,ಲಕ್ಷಿತ್ ಜೆ ಶೆಟ್ಟಿ, ಮೋಕ್ಷಿತ ಎಚ್. ಎಸ್ ,ತನ್ವಿ ಎಂ ಗೌಡ, ಸಾನ್ವಿ ಎಸ್, ಪ್ರೀತಮ್ ಗೌಡ ಹಾಗೂ ತೃತೀಯ ಸ್ಥಾನದಲ್ಲಿ ಮಾಯಾಂಕ್ ಟಿ, ನೂತನ್ ಗೌಡ ಎ.ಆರ್, ಹೇಮಾಶ್ರೀ ಸಿ.ಡಿ, ಯುಕ್ತಿ ಎಚ್.ಎನ್ , ಜೀವನ್ ಎಚ್ .ಸಿ, ಪಡೆದಿದ್ದಾರೆ.

ಅವರ ಶಿಸ್ತಿನ ತರಬೇತಿ, ಪರಿಶ್ರಮ ಮತ್ತು ಆತ್ಮವಿಶ್ವಾಸದ ಫಲವಾಗಿ ಈ ಮಹತ್ವದ ಸಾಧನೆ ಸಾಧ್ಯವಾಗಿದೆ. ಹಾಗೂ ಕರಾಟೆ ಶಿಕ್ಷಕರಾದ ಸೆನ್ಸೈ ಸುಮಂತ್ ಹೆಚ್.ಸಿ ಮತ್ತು ಸೆನ್ಸೈ ವಿಶ್ವಂತ್ ಹೆಚ್.ಸಿ ರವರು ಮಕ್ಕಳಿಗೆ ಹೆಚ್ಚಿನ ಶ್ರಮವಹಿಸಿ ಈ ಪಂದ್ಯಾವಳಿಗೆ ತಯಾರಿ ಮಾಡಿದ್ದು ಮಕ್ಕಳ ಯಶಸ್ಸಿ ಗೆ ಪಾತ್ರರಾಗಿದ್ದು ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕ ವರ್ಗದವರು ಮತ್ತು ಪೋಷಕರು ಮಕ್ಕಳಿಗೆ ಅಭಿನಂದನೆ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆ ಹಾಸನ ಜಿಲ್ಲೆಯಷ್ಟೇ ಅಲ್ಲದೆ ರಾಜ್ಯ ಮಟ್ಟದಲ್ಲಿಯೂ ಹೆಮ್ಮೆ ಮೂಡಿಸಿದ್ದು ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ವಿಶ್ವಾಸವನ್ನು ತರಬೇತುದಾರರು ವ್ಯಕ್ತಪಡಿಸಿದ್ದಾರೆ.

# ಸಂತೋಷ್ ಲಾಡ್ ಹುಟ್ಟುಹಬ್ಬ ಅಂಗವಾಗಿ ಸನ್ಮಾನ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ 52ನೇ ಜನ್ಮದಿನದ ಪ್ರಯುಕ್ತ ಇದೇ ಫೆ.27ರ ಗುರುವಾರ ನಗರದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹಾಸನ ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣ್ಯ ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಈ ವಿಷಯ ತಿಳಿಸಿದ ಅವರು, ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘ ಮತ್ತು ಸಂಜೀವಿನಿ ಜೀವ ರಕ್ಷಕ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಗೌರವಿಸುವ ಉದ್ದೇಶ ಹೊಂದಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಬಾಬು ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣ್ಯ ಎಸ್.ಎಲ್., ಉಪಾಧ್ಯಕ್ಷ ವರಪ್ರಸಾದ್ ಹಾಗೂ ಸಂಜಯ್ ಟಿ.ಜಿ., ಸೇರಿದಂತೆ ಸಂಘದ ಇತರೆ ಪದಾಧಿಕಾರಿಗಳು ಮತ್ತು ಸದಸ್ಯರು ಸಕ್ರಿಯವಾಗಿ ಭಾಗವಹಿಸಲಿದ್ದಾರೆ ಎಂದರು. ಪತ್ರಿಕೋದ್ಯಮ ಕ್ಷೇತ್ರದಿಂದ ಹಿರಿಯ ಪತ್ರಕರ್ತರು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಜೆ.ಆರ್.ಕೆಂಚೇಗೌಡ ಸೇರಿದಂತೆ, ಶಿಕ್ಷಣ, ಆರೋಗ್ಯ, ಸಮಾಜಸೇವೆ, ಕಾರ್ಮಿಕರ ಹಿತಾಸಕ್ತಿ, ಕ್ರೀಡೆ, ಸಮಾಜಸೇವೆ, ಪರಿಸರ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು ಎಂದರು. ಕಾರ್ಮಿಕರ ಹಕ್ಕುಗಳ ಪರ ಹೋರಾಟ ಮತ್ತು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಂಘವು, ಸಚಿವರ ಜನ್ಮದಿನವನ್ನು ಸೇವಾ ಚಟುವಟಿಕೆಗಳ ಮೂಲಕ ಆಚರಿಸುವ ನಿರ್ಧಾರ ಕೈಗೊಂಡಿದೆ. ಈ ಕಾರ್ಯಕ್ರಮ ಹೊಸಲೈನ್ ಮುಖ್ಯ ರಸ್ತೆಯಲ್ಲಿರುವ, ಡಿ.ಆರ್.ಎ ಪೊಲೀಸ್ ಕ್ವಾಟ್ರಸ್ ಕ್ರಾಸ್ ರಸ್ತೆಯ ಶಾಂತಣ್ಣನ ಸೊಸೈಟಿ ಬಿಲ್ಡಿಂಗ್‌ನ ಮೊದಲ ಮಹಡಿಯಲ್ಲಿರುವ ಹಾಸನ ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದ ಕಚೇರಿಯಲ್ಲಿ ನಡೆಯಲಿದ್ದು, ಎಲ್ಲರೂ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಬಾಬು, ಉಪಾಧ್ಯಕ್ಷ ವರಪ್ರಸಾದ್, ಸಂದೀಪ್ ಇದ್ದರು.

# ಗ್ಯಾರೆಂಟಿ ಯೋಜನೆಗಳಲ್ಲಿ ಲೋಪ ಮರು ಕಳಿಸದಂತೆ ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ರಾಜ್ಯದಲ್ಲಿ ಜಾರಿಯಲ್ಲಿರುವ ಐದು ಗ್ಯಾರಂಟಿ ಯೋಜನೆಗಳು ಶೇ.98 ರಷ್ಟು ಜನರಿಗೆ ತಲುಪಿದ್ದು, ಇದು ಸರ್ಕಾರಕ್ಕೆ ಸಂತೋಷದ ವಿಚಾರ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಾದ್ಯಂತ 1.24 ಕೋಟಿ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತಿದೆ. ಇದುವರೆಗೆ ಒಟ್ಟು

1 ಲಕ್ಷ 18 ಸಾವಿರ ಕೋಟಿ ರೂ. ನೇರ ಲಾಭಾಂಶ ವರ್ಗಾವಣೆ ಮೂಲಕ ಜನರಿಗೆ ಸಂದಾಯವಾಗಿದೆ. ಹಾಸನ ಜಿಲ್ಲೆಯಲ್ಲಿ ಮಾತ್ರ 1 ಕೋಟಿ 70 ಲಕ್ಷ ರೂ. ವಿತರಣೆ ಆಗಿದೆ ಎಂದು ಹೇಳಿದರು. ಆದರೆ, ಸಾವನ್ನಪ್ಪಿರುವ ಕೆಲವರ ಬ್ಯಾಂಕ್ ಖಾತೆಗಳಿಗೆ ಸಹ ಹಣ ಜಮೆಯಾಗಿರುವುದು ಗಮನಕ್ಕೆ ಬಂದಿದ್ದು, ಆ ಮೊತ್ತವನ್ನು ವಾಪಸ್ ಪಡೆಯುವ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಇಂತಹ ದೋಷ ಮರುಕಳಿಸದಂತೆ ಜಾಗ್ರತೆ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಇಡೀ ಜಿಲ್ಲೆಯ ಗ್ಯಾರಂಟಿ ಯೋಜನೆಗಳ ಮಾಹಿತಿ ಸಂಗ್ರಹಿಸಲು ಈಗಾಗಲೇ ಮೀಡಿಯಾ ಸೆಲ್ ಆರಂಭಿಸಲಾಗಿದೆ. ಉತ್ತಮವಾಗಿ ಕಾರ್ಯನಿರ್ವಹಿಸುವವರಿಗೆ ಮೂರು ಬಹುಮಾನ ನೀಡಲಾಗುವುದು. ಮನೆಗೆ ಐದು ಗ್ಯಾರಂಟಿ, ಮನೆ ಮುಂದೆ ರಂಗೋಲಿ ಕಾರ್ಯಕ್ರಮ ಜಾರಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

> ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆ ಬಗ್ಗೆ ಪ್ರತಿಕ್ರಿಯಿಸಿ ಎಚ್.ಎಂ.ರೇವಣ್ಣ, ಸಿಎಂ ಬದಲಾವಣೆಗೂ ನನಗೂ ಸಂಬಂಧವಿಲ್ಲ. ನಾನು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ. ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು ಪಕ್ಷದ ನಾಯಕರು ಮತ್ತು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು. ಸಿಎಂ ಬದಲಾವಣೆ ಕುರಿತ ಹೇಳಿಕೆಗಳಿಂದ ತಮಗೂ ನೋವಾಗಿದೆ. ಇದರಿಂದ ಪಕ್ಷಕ್ಕೂ ಹಾನಿಯಾಗಬಹುದು. ಶೀಘ್ರದಲ್ಲೇ ಸ್ಪಷ್ಟ ತೀರ್ಮಾನ ಕೈಗೊಳ್ಳಬೇಕು ಎಂದು ರಾಜ್ಯದ ಹಿರಿಯ ನಾಯಕರು ಹಾಗೂ ಹೈಕಮಾಂಡ್ ಗೆ ಮನವಿ ಮಾಡಿದ್ದೇವೆ ಎಂದು ಹೇಳಿದರು.

### ಗೃಹಲಕ್ಷ್ಮಿ ಯೋಜನೆ ಕುರಿತು ಸ್ಪಷ್ಟನೆ

ಗೃಹಲಕ್ಷ್ಮಿ ಯೋಜನೆ ಹಣ ಬಿಡುಗಡೆ ವಿಳಂಬ ಕುರಿತು ಮಾತನಾಡಿದ ಅವರು, ಯಾವುದೇ ಜಾತಿ ಅಥವಾ ಪಕ್ಷ ಆಧಾರದ ಮೇಲೆ ಗ್ಯಾರಂಟಿಗಳ ವಿಂಗಡಣೆ ಮಾಡಿಲ್ಲ. ಹಣ ಪಡೆದಿರುವವರು ಬಹಳ ಸಂತೋಷವಾಗಿದ್ದಾರೆ. ವಿರೋಧ ಪಕ್ಷ ಬಿಜೆಪಿ ಆರಂಭದಿಂದಲೂ ಈ ಯೋಜನೆಗಳನ್ನು ವಿರೋಧಿಸುತ್ತಿದ್ದು, ರಾಜಕೀಯ ಕಾರಣಗಳಿಂದ ಟೀಕೆ ಮಾಡುತ್ತಿದೆ ಟಾಂಗ್ ನೀಡಿದರು.

ಧಾರವಾಡದಲ್ಲಿ ನಡೆದ ಉದ್ಯೋಗ ಭರ್ತಿಗೆ ಆಗ್ರಹಿಸಿ ನಡೆದ ಪ್ರತಿಭಟನೆ ಕುರಿತು ಮಾತನಾಡಿ, ವಿದ್ಯಾರ್ಥಿ ನಾಯಕನಾಗಿ ಹೋರಾಟದ ಮಹತ್ವ ತಿಳಿದಿದ್ದರೂ, ಪರಿಸ್ಥಿತಿಯನ್ನು ಅವಲೋಕನ ಮಾಡಿ ಕ್ರಮ ಕೈಗೊಳ್ಳಬೇಕು ಎಂದರು. ಹಿಂದಿನ ಸರ್ಕಾರದ ಅವಧಿಯಲ್ಲಿ ನೇಮಕಾತಿಯಲ್ಲಿ ಮೋಸ-ವಂಚನೆ ನಡೆದ ಕಾರಣ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಆದರೆ ನಮ್ಮ ಸರ್ಕಾರ ಬಂದ ಬಳಿಕ 40 ಸಾವಿರ ಉದ್ಯೋಗ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ನೇಮಕಾತಿ ನಡೆಯಲಿದೆ ಎಂದು ಭರವಸೆ ನೀಡಿದರು.

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-26

ಹ್ಯಾಲಿಯ ಧೂಮಕೇತುವಿನ 837 ನೇ ದಾಖಲಿತ ಪೆರಿಹೆಲಿಯನ್ ಹಾದಿ

1454 ಪೋಲಿಷ್ ಮತ್ತು ಪ್ರಶ್ಯನ್ ಪಡೆಗಳಿಂದ ಪ್ರಾರಂಭವಾದ ಟ್ಯೂಟೋನಿಕ್ ಆದೇಶದ ಸ್ಥಾನವಾದ ಮಾಲ್ಬೋರ್ಕ್‌ನ ಕೋಟೆ ಸೇರಿದಂತೆ ಮುತ್ತಿಗೆ - ಸೆಪ್ಟೆಂಬರ್ 1454 ರಲ್ಲಿ ವಶಪಡಿಸಿಕೊಂಡಿತು.

1526 ರಲ್ಲಿ ಸ್ಯಾಕ್ಸೊನಿ ಮತ್ತು ಹೆಸ್ಸೆ ಗಳು ಲೀಗ್ ಆಫ್ ಗೋಥಾ (ಪ್ರೊಟೆಸ್ಟಂಟ್ ರಾಜಕುಮಾರರ ಲೀಗ್) ಅನ್ನು ರಚಿಸಿದರು.

1531 ರಲ್ಲಿ ಜರ್ಮನ್ ಸುವಾರ್ತಾಬೋಧಕ ಪಟ್ಟಣಗಳು ??ಷ್ಮಾಲ್ಕಾಲ್ಡಿಕ್ ಒಕ್ಕೂಟವನ್ನು ರಚಿಸಿದವು.

1557 ಇಂಗ್ಲೆಂಡ್‌ಗೆ ರಷ್ಯಾದ ಮೊದಲ ರಾಯಭಾರಿ ಓಸೆಪ್ ಗ್ರೆಗೊರಿವಿಚ್ ನೇಪಿಯಾ ಲಂಡನ್‌ಗೆ ಆಗಮಿಸಿದರು.

1563: ಇಂಗ್ಲೆಂಡ್‌ನ ಲಿಂಕನ್‌ನ ಲಿಂಕನ್ ಕ್ಯಾಥೆಡ್ರಲ್‌ನಲ್ಲಿ ಬ್ರಿಟಿಷ್ ಸಂಯೋಜಕ ವಿಲಿಯಂ ಬೈರ್ಡ್ ಆರ್ಗನ್ ವಾದಕರಾಗಿ ನೇಮಕಗೊಂಡರು.

1594 ರಲ್ಲಿ ಚಾರ್ಟ್ರೆಸ್ ಕ್ಯಾಥೆಡ್ರಲ್‌ನಲ್ಲಿ ಫ್ರಾನ್ಸ್ ರಾಜನಾಗಿ ಹೆನ್ರಿ ಗಿ ಕಿರೀಟಧಾರಣೆ ಮಾಡಲಾಯಿತು, ಅಲ್ಲಿ ಕಿರೀಟಧಾರಣೆ ಮಾಡಿದ ಏಕೈಕ ಫ್ರೆಂಚ್ ದೊರೆ (ರೀನ್ಸ್ ಮತ್ತು ಪ್ಯಾರಿಸ್ ಅನ್ನು ಕ್ಯಾಥೋಲಿಕ್ ಲೀಗ್ ಆಕ್ರಮಿಸಿಕೊಂಡಿದೆ)

1623 ಅಂಬೋಯ್ನಾ ಹತ್ಯಾಕಾಂಡ: ಅಂಬೋನ್ ದ್ವೀಪದಲ್ಲಿ (ಆಧುನಿಕ ಇಂಡೋನೇಷ್ಯಾ) ತಮ್ಮ ಕೋಟೆಯನ್ನು ವಶಪಡಿಸಿಕೊಳ್ಳಲು ಯೋಜಿಸಿದ್ದಕ್ಕಾಗಿ ಹತ್ತು ಇಂಗ್ಲಿಷ್, ಹತ್ತು ಜಪಾನೀಸ್ ಮತ್ತು ಒಬ್ಬ ಪೋರ್ಚುಗೀಸರ ಶಿರಚ್ಛೇದ ಮಾಡಲಾಯಿತು.

1626 - ನೂರ್ಹಾಸಿ ನೇತೃತ್ವದಲ್ಲಿ ಮಂಚೂರಿಯನ್ನರ ವಿರುದ್ಧ ಚೀನಿಯರು ಭರ್ಜರಿ ಜಯ ಸಾಧಿಸುವಂತೆ ಮಾಡಿದ ನಂತರ, ಯುವಾನ್ ಚೊಂಗ್ಹುವಾನ್ ಅವರನ್ನು ಲಿಯಾಮೊಡಾಂಗ್ ಗವರ್ನರ್ ಆಗಿ ನೇಮಿಸಲಾಯಿತು.

1665 ಗೋಲ್ಡ್ ಕೋಸ್ಟ್‌ನ ಎಲ್ಮಿನಾದಲ್ಲಿ ನಡೆದ ಯುದ್ಧ: ಡಚ್ ವೈಸ್-ಅಡ್ಮಿರಲ್ ಡಿ ರುಯ್ಟರ್ ಬ್ರಿಟಿಷರಿಂದ ಫೋರ್ಟ್ ಕಾರ್ಮಂಟಿನ್ ಅನ್ನು ವಶಪಡಿಸಿಕೊಂಡರು.

1667 ಅಬ್ರಹಾಂ ಕ್ರಿಜೆನ್ಸೆನ್ ಫೋರ್ಟ್ ವಿಲ್ಲೋಬಿ (ಝೀಲ್ಯಾಂಡಿಯಾ), ಸುರಿನಾಮ್ ಅನ್ನು ವಶಪಡಿಸಿಕೊಂಡರು

1670: ಪವಿತ್ರ ರೋಮನ್ ಚಕ್ರವರ್ತಿ ಲಿಯೋಪೋಲ್ಡ್ ಎಲ್ಲಾ ಯಹೂದಿಗಳನ್ನು ಆಸ್ಟ್ರಿಯಾದಿಂದ ಹೊರಹಾಕಲು ಆದೇಶಿಸಿದರು, ಅದನ್ನು ಪಾಲಿಸಲು ಆಗಸ್ಟ್ ವರೆಗೆ ಕಾಲಾವಕಾಶ ನೀಡಲಾಯಿತು.

# ರಸ್ತೆ ಸುರಕ್ಷತೆ, ಡ್ರಗ್ಸ್ ವಿರುದ್ಧ ಜಾಗೃತಿ ಅಗತ್ಯ : ಸಮಾಜವೇ ಎಚ್ಚರಗೊಳ್ಳಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಸಮಾಜದಲ್ಲಿ ಸೇವಾ ಸಂಘಟನೆಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಣ, ಆರೋಗ್ಯ ಹಾಗೂ ಜಾಗೃತಿ ಕಾರ್ಯಕ್ರಮಗಳ ಮೂಲಕ ಸಮಾಜ ಪರಿವರ್ತನೆ ಸಾಧ್ಯ ಹಾಗೂ ರಸ್ತೆ ಸುರಕ್ಷತೆ, ಡ್ರಗ್ಸ್ ವಿರುದ್ಧ ಜಾಗೃತಿ ಅಗತ್ಯ, ಇದಕ್ಕೆ ಸಮಾಜವೇ ಎಚ್ಚರಗೊಳ್ಳಬೇಕು ಎಂದು ಹಾಸನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಜಿ.ಕೆ. ದಾಕ್ಷಾಯಿಣಿ ಸಲಹೆ ನೀಡಿದರು.

ನಗರದ ರವೀಂದ್ರನಗರದಲ್ಲಿರುವ ಕುರುಹಿನಶೆಟ್ಟಿ ಸಮುದಾಯ ಭವನದಲ್ಲಿ ಲಯನ್ಸ್ ಕ್ಲಬ್ ಹಾಸನಾಂಬ ವತಿಯಿಂದ ಆಯೋಜಿಸಿದ್ದ ಸರ್ವ ಸದಸ್ಯರ ಸಾಮಾನ್ಯ ಸಭೆ, ಮಾಜಿ ಜಿಲ್ಲಾ ರಾಜಪಾಲರ ತಿಂಗಳ ದಿನಾಚರಣೆ, ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ಸರ್ಕಾರಿ ಶಾಲಾ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಫಿಲ್ಟರ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿ, ಹಾಸನಾಂಬ ಲಯನ್ಸ್ ಕ್ಲಬ್ ಕಳೆದ ಹಲವು ವರ್ಷಗಳಿಂದ ಸರ್ಕಾರಿ ಶಾಲೆಗಳಿಗೆ ಸಮವಸ್ತ್ರ ವಿತರಣೆ, ಆರೋಗ್ಯ ಶಿಬಿರಗಳು, ರಕ್ತದಾನ ಶಿಬಿರಗಳು ಹಾಗೂ ಕುಡಿಯುವ ನೀರಿನ ಫಿಲ್ಟರ್ ವಿತರಣೆ ಸೇರಿದಂತೆ ಹಲವಾರು ಸೇವಾ ಚಟುವಟಿಕೆಗಳನ್ನು ನಡೆಸುತ್ತಿರುವುದು ಶ್ಲಾಘನೀಯ. ಇಂತಹ ಸಂಘಟನೆಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರಮುಖ ಪಾತ್ರ ವಹಿಸುತ್ತವೆ ಎಂದರು. ಹಾಸನ ಹಾಗೂ ಜಿಲ್ಲೆಯಾದ್ಯಂತ ಹೆಚ್ಚುತ್ತಿರುವ ರಸ್ತೆ ಅಪಘಾತಗಳ ಕುರಿತು ಆತಂಕ ವ್ಯಕ್ತಪಡಿಸಿದ ಅವರು, ಹೆಲ್ಮೆಟ್ ಧರಿಸುವುದರಿಂದ ಅನೇಕ ಅಮೂಲ್ಯ ಜೀವಗಳನ್ನು ಉಳಿಸಬಹುದು. ಸುರಕ್ಷತೆಗಾಗಿ ಎಲ್ಮೆಟ್ ಕಡ್ಡಾಯವಾಗಿ ಧರಿಸಬೇಕು.

ರಸ್ತೆಗಳಲ್ಲಿ ಅಳವಡಿಸಲಾಗುವ ಹಂಪ್‌ಗಳಿಗೆ ಸ್ಪಷ್ಟ ಬಣ್ಣ, ಪ್ರತಿಫಲಕ ಪಟ್ಟಿಗಳು ಮತ್ತು ಸೂಚನಾ ಫಲಕಗಳು ಇರಬೇಕು. ರಾತ್ರಿ ಸಮಯದಲ್ಲಿ ಕಾಣುವಂತೆ ವ್ಯವಸ್ಥೆ ಮಾಡದಿದ್ದರೆ ಅಪಘಾತಗಳು ಹೆಚ್ಚಾಗುತ್ತವೆ ಎಂದು ಕಳೆದ ಎರಡು ದಿನಗಳ ಹಿಂದೆ ಯುವತಿ ಅಪಘಾತದ ಕುರಿತು ಆತಂಕವ್ಯಕ್ತಪಡಿಸಿದರು. ರಸ್ತೆ ಸುರಕ್ಷತೆ ಕುರಿತು ಶಾಲಾ-ಕಾಲೇಜು ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು. ಯುವಜನತೆ ಡ್ರಗ್ಸ್ ವ್ಯಸನಕ್ಕೆ ಒಳಗಾಗುತ್ತಿರುವುದು ಸಮಾಜಕ್ಕೆ ಭೀತಿಕರ ಬೆಳವಣಿಗೆ. ಬದಲಾಗುತ್ತಿರುವ ಜೀವನಶೈಲಿ, ಪೋಷಕರ ಸಮಯಾಭಾವ ಮತ್ತು ಮೊಬೈಲ್ ದುರುಪಯೋಗವು ಮಕ್ಕಳ ಭವಿಷ್ಯಕ್ಕೆ ಅಪಾಯಕಾರಿಯಾಗಬಹುದು. ಪೋಷಕರು ಮಕ್ಕಳ ಚಟುವಟಿಕೆಗಳ ಮೇಲೆ ನಿಗಾ ವಹಿಸಿ, ಮೌಲ್ಯಾಧಾರಿತ ಶಿಕ್ಷಣ ನೀಡಬೇಕು ಎಂದು ಎಚ್ಚರಿಸಿದರು.

ಕಾರ್ಯಕ್ರಮದ ಅಂಗವಾಗಿ ವಿವೇಕಾನಂದರು ಹಾಗೂ ಮೆಲ್ವಿನ್ ಜೋನ್ಸ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರ ಆದರ್ಶಗಳನ್ನು ಸ್ಮರಿಸಲಾಯಿತು. ಬಳಿಕ ಹಾಸನ ಸರ್ಕಾರಿ ವಾಣಿವಿಲಾಸ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರಿಗೆ ಶುದ್ಧ ಕುಡಿಯುವ ನೀರಿನ ಫಿಲ್ಟರ್ ಹಸ್ತಾಂತರಿಸಲಾಯಿತು. ವಿದ್ಯಾರ್ಥಿಗಳಿಗೆ ಆರೋಗ್ಯಕರ ಪರಿಸರ ಕಲ್ಪಿಸುವುದು ಇದರ ಉದ್ದೇಶ ಎಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ ಗಣ್ಯರನ್ನು ಸನ್ಮಾನಿಸಿ, ಹೊಸ ಸದಸ್ಯರನ್ನು ಕ್ಲಬ್‌ಗೆ ಅಧಿಕೃತವಾಗಿ ಸೇರಿಸಿಕೊಳ್ಳುವ ಮೂಲಕ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲಾಯಿತು. ಸೇವೆಯ ಮೂಲಕ ಸಮಾಜ ನಿರ್ಮಾಣವೇ ಲಯನ್ಸ್ ಕ್ಲಬ್‌ನ ಧ್ಯೇಯವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಪದಾಧಿಕಾರಿಗಳು ತಿಳಿಸಿ ಪಣತೊಟ್ಟರು.

ಕ್ಲಬ್ ಅಧ್ಯಕ್ಷ ಕೆ.ಕೆ. ಮೋಹನ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ರಾಜಪಾಲರಾದ ಡಾ. ಎಚ್. ಎಸ್. ಮಂಜುನಾಥ ಮೂರ್ತಿ, ಜಿಲ್ಲಾ ಸಂಪುಟ ಕಾರ್ಯದರ್ಶಿ ಹೆಚ್.ಆರ್. ಚಂದ್ರೇಗೌಡ, ಪ್ರಾಂತೀಯ ಅಧ್ಯಕ್ಷ ಸಿ.ಜಿ. ಕೇಶವಮೂರ್ತಿ, ವಲಯ ಅಧ್ಯಕ್ಷ ಎಚ್.ಕೆ. ನಾಗೇಶ್, ಸಂಪುಟ ಸಹ ಕಾರ್ಯದರ್ಶಿ ತಿಮ್ಮರಾಯ ಶೆಟ್ಟಿ, ರೀಜನ್ ಅಂಬಾಸಿಡರ್ ಕೃಷ್ಣಶೆಟ್ಟಿ, ಕಾರ್ಯದರ್ಶಿ ಎಂ.ಹೆಚ್. ಮಂಜುನಾಥ್ ಹಾಗೂ ಖಜಾಂಚಿ ಹರೀಶ್ ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬಾಣಂತಿ ಸಾವು ಪ್ರಕರಣ ವರದಿಗೆ ಸಂಸದ ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿಮ್ಸ್ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಬಾಣಂತಿ ಸಾವನ್ನಪ್ಪಿರುವ ಕುರಿತು ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಂಸದ ಶ್ರೇಯಸ್ ಎಂ.ಪಟೇಲ್ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ನಗರದ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಿಶುವಿನ ಆರೋಗ್ಯ ವಿಚಾರಿಸಿದ ಸಂಸದರು, ನಂತರ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಭೆ ನಡೆಸಿ ವಿವರ ಪಡೆದುಕೊಂಡರು.

ಪ್ರಕರಣ ಸಂಬಂಧ ಅಸಮಾಧಾನ ವ್ಯಕ್ತಪಡಿಸಿದ ಅವರು, ಆಸ್ಪತ್ರೆಯಲ್ಲಿ ಪದೇ ಪದೆ ಇಂತಹ ಘಟನೆಗಳು ಮರುಕಳಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಹೇಳಿದರು.

ವೈದ್ಯರ ನಿರ್ಲಕ್ಷ್ಯ ಎಂಬ ಆಪಾದನೆಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ. ತಪ್ಪಿದ್ದರೆ ಯಾವುದೇ ಹಂತದಲ್ಲಿಯೂ

ಸಹಿಸುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಖಡಕ್ ಸೂಚನೆ ನೀಡಿದರು.

ಆಸ್ಪತ್ರೆಯ ಗ್ರೂಪ್-ಡಿ ನೌಕರರು ಹಾಗೂ ಕೆಲವು ಸಿಬ್ಬಂದಿ ವರ್ತನೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಅವರು, ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರೊಂದಿಗೆ ಬರುವವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ದರ್ಪದಿಂದ ಮಾತನಾಡುವವರನ್ನು ಕೂಡಲೇ ಅಮಾನತು ಮಾಡಿ, ಸಾರ್ವಜನಿಕ ಸೇವಾ ಸಂಸ್ಥೆಯಲ್ಲಿ ಮಾನವೀಯತೆ ಮುಖ್ಯ ಎಂದು ಎಚ್ಚರಿಸಿದರು. ಮುಂದಿನ ದಿನಗಳಲ್ಲಿ ಇಂತಹ ದುರ್ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಆಸ್ಪತ್ರೆಯ ವೈದ್ಯರು ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248